ನಕ್ಷತ್ರ ಪಟ



ರಾಜಶೇಖರ ಕುಕ್ಕುಂದಾ

ಕಲೆ: ಸಂತೋಷ್ ಸಸಿಹಿತ್ಲು

# ಬಾರೋ ಬಾರೋ ಮಳೆರಾಯ



ಬಾರೋ ಬಾರೋ ಮಳೆರಾಯ
ಬೇಸರವಾಗಿದೆ ಮಹಾರಾಯ
ರಪರಪ ರಪರಪ ಸುರಿಸಿಬಿಡು
ಹೊಳೆ ಹಳ್ಳಗಳ ಹರಿಸಿಬಿಡು
ಟರ ಟರ ಒದರಲಿ ಕಪ್ಪೆಗಳು
ಸದ್ದಿಡಲೀ ಟೀ ಕಪ್ಪುಗಳು

ಬಾರೋ ಬಾರೋ ಮಳೆರಾಯ
ಬೇಸರವಾಗಿದೆ ಮಹಾರಾಯ
ಕಾಡಿನ ಮಳೆಯನು ಸುರಿಸಿಬಿಡು
ಶಾಲೆಯ ಚಿಂತೆಯ ಮರೆಸಿಬಿಡು
ಗುಡ್‌ಬೈ ಹೇಳುವೆ ಪಾಠಕ್ಕೆ
ಸಿಕ್ಕಿಬಿಡು ನೀ ಆಟಕ್ಕೆ

ಬಾರೋ ಬಾರೋ ಮಳೆರಾಯ
ಬೇಸರವಾಗಿದೆ ಮಹಾರಾಯ
ಗುಡುಗುಡು ಗುಡುಗುಡು ಗುಡುಗುತ್ತ
ಮಿಣಮಿಣ ಮಿಣಮಿಣ ಮಿಂಚುತ್ತ
ಹಗಲಿರುಳಿನ ಈ ಹೊತ್ತೆಲ್ಲ
ಸಂತಸ ಹರಡಲಿ ಸುತ್ತೆಲ್ಲ

ಬಾರೋ ಬಾರೋ ಮಳೆರಾಯ
ಬೇಸರವಾಗಿದೆ ಮಹಾರಾಯ
ಕಡಲೆಯ ಹಿಟ್ಟದು ಹಸಿಯಾಗಿ
ಎಣ್ಣೆಯ ಬಾಣಲೆ ಬಿಸಿಯಾಗಿ
ಬಿಸಿ ಬಿಸಿ ಭಜಿಯು ರೆಡಿಯಾಗಿ
ಹೊಟ್ಟೆಯ ಸೇರಲಿ ಇಡಿಯಾಗಿ!